# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 10-10-2022

## ಜನವಾಡಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 106/2022 ಕಲಂ 15(ಎ) 32(3) ಕೆಇ ಕಾಯ್ದೆ:-

ದಿನಾಂಕ: 09/10/2022 ರಂದು ಬೆಳಿಗ್ಗೆ ಪಿಎಸ್ಐ ರವರು ಈದ-ಮಿಲಾದ ಹಬ್ಬದ ನಿಮಿತ್ಯ ಸಿಬ್ಬಂದಿಯವರೊಂದಿಗೆ ಪೆಟ್ರೊಲಿಂಗ್ ಕರ್ತವ್ಯ ನಿರ್ವಹಿಸುತ್ತಾ ವಿಳಾಸಪೂರ ಕ್ರಾಸ್ ಹತ್ತಿರ ಹೋದಾಗ ವಿಳಾಸಪೂರ ಗ್ರಾಮದ ಕನಕದಾಸ ಚೌಕ ಹತ್ತಿರ ಇರುವ ಒಂದು ಹೊಟೇಲ್ ಮುಂದುಗಡೆ ಹೊಟೇಲ್ ಮಾಲೀಕ ಸಾರ್ವಜನಿಕರಿಗೆ ಸರಾಯಿ ಕುಡಿಯಲು ಅನುವು ಮಾಡಿಕೊಡುತ್ತಿದ್ದಾನೆ ಅಂತ ಖಚಿತ ಬಾತ್ಮಿ ಬಂದ ಮೇರೆಗೆ ದಾಳಿ ಮಾಡಿ ದಾಳಿ ಮಾಡಿ ಹಿಡಿದು ಹೆಸರು ಮತ್ತು ವಿಳಾಸ ವಿಚಾರಿಸಲಾಗಿ ಈತ ತನ್ನ ಹೆಸರು ಧನರಾಜ ತಂದೆ ಸುಭಾಷ ಮೇತ್ರೆ ವಯ: 26 ವರ್ಷ ಉ: ಹೊಟೇಲ್ ಅಂಗಡಿ ಜಾ: ಎಸ್ಸಿ ಗೊಂಡ ಸಾ: ವಿಳಾಸಪೂರ ಗ್ರಾಮ ಅಂತ ತಿಳಿಸಿದ್ದು ತಾನು ಹೊಟೇಲ್ ಮಾಲೀಕನಿರುವುದಾಗಿ ತಿಳಿಸಿರುತ್ತಾನೆ. ಸ್ಥಳ ಪರಿಶೀಲಿಸಿ ನೋಡಲಾಗಿ ಅಂಗಡಿಯ ಮುಂದುಗಡೆ ಕಟ್ಟೆಯ ಮೇಲೆ 180 ಎಂ.ಎಲ್.ನ ಒಲ್ಡ ಟವೇರನ್ ವಿಸ್ಕಿ ಹೆಸರಿನ 4 ಸರಾಯಿ ತುಂಬಿರುವ ಪೌಚ್ಗಳು ಒಂದರ ಅ.ಕಿ. 86/- ರೂಪಾಯಿಯಂತೆ ಒಟ್ಟು 344/- ರೂಪಾಯಿ ಬೆಲೆಯುಳ್ಳದ್ದು, ಮತ್ತು ಸರಾಯಿ ಕುಡಿದು ಖಾಲಿ ಮಾಡಿರುವ 180 ಎಂ.ಎಲ್.ನ ಒಲ್ಡ ಟವೇರನ್ ವಿಸ್ಕಿ 2 ಖಾಲಿ ಪೌಚ್ಗಳು, ಮತ್ತು ಸರಾಯಿ ಕುಡಿಯಲು ಉಪಯೋಗಿಸಿದ 2 ಪ್ಲಾಸ್ಟಿಕ್ ಗ್ಲಾಸ್ಗಳು ಹಾಗು ಒಂದು ಪ್ಲಾಸ್ಟಿಕ್ ಮಗ್ ಇವೆಲ್ಲವುಗಳನ್ನು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಜನವಾಡಾ ಪೊಲೀಸ್ ಠಾಣೆ. ಅಪರಾಧ ಸಂಖ್ಯೆ 107/2022 ಕಲಂ, 87 ಕೆಪಿ ಕಾಯ್ದೆ :_-

ದಿನಾಂಕ: 09/10/2022 ರಂದು ಮಧ್ಯಾಹ್ನ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ವಿಳಾಸಪೂರ ಗ್ರಾಮದ ಸುಭಾಷ ಮೇತ್ರೆ ರವರ ಕಿರಾಣಾ ಅಂಗಡಿಯ ಪಕ್ಕದಲ್ಲಿರುವ ಖುಲ್ಲಾ ಜಾಗೆಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಹಣ ಪಣಕ್ಕೆ ಕಟ್ಟಿ ಅಂದರ-ಬಾಹರ ಎಂಬ ನಸೀಬಿನ ಇಸ್ಪಿಟ್ ಜೂಜಾಟ ಆಡುತ್ತಿದ್ದ ಬಗ್ಗೆ ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ನೋಡಲಾಗಿ ಅಂಗಡಿಯ ಪಕ್ಕದಲ್ಲಿರುವ ಖುಲ್ಲಾ ಜಾಗೆಯಲ್ಲಿ ನಾಲ್ಕು ಜನರು ಹಣ ಪಣಕ್ಕೆ ಕಟ್ಟಿ ಅಂದರ-ಬಾಹರ್ ಎಂಬ ನಸೀಬಿನ ಇಸ್ಪಿಟ್ ಜೂಜಾಟ ಆಡುತ್ತಿದ್ದು ಪಂಚರ ಸಮಕ್ಷಮ 1715 ಗಂಟೆಗೆ ಜೂಜಾಟದಲ್ಲಿ ತೋಡಗಿದ್ದ 1] ಮಲ್ಲಿಕಾರ್ಜುನ ತಂದೆ ಫಾಳೆಪ್ಪಾ ಕಮಲಾಪೂರೆ ವಯ: 47 ವರ್ಷ ಜಾ: ಎಸ್.ಟಿ. ಗೊಂಡ ಉ: ಡ್ರೈವರ್ ಸಾ: ವಿಳಾಸಪೂರ ಗ್ರಾಮ 2] ರಾಜಪ್ಪಾ ತಂದೆ ಶರಣಪ್ಪಾ ಕುಂಬಾರ ವಯ: 48 ವರ್ಷ ಉ: ಕೂಲಿಕೆಲಸ ಜಾ: ಕುಂಬಾರ ಸಾ: ವಿಳಾಸಪೂರ ಗ್ರಾಮ , 3] ರಾಮೇಶ್ವರ ತಂದೆ ವೈಜಿನಾಥ ಉಪ್ಪಾರ ವಯ: 32 ವರ್ಷ ಉ: ಒಕ್ಕಲುತನ ಜಾ: ಉಪ್ಪಾರ್ ಸಾ: ವಿಳಾಸಪೂರ ಗ್ರಾಮ 4] ರಾಜಕುಮಾರ ತಂದೆ ವೈಜಿನಾಥ ಸ್ವಾಮಿ ವಯ:35 ವರ್ಷ ಉ: ಒಕ್ಕಲುತನ ಜಾ: ಸ್ವಾಮಿ ಸಾ: ವಿಳಾಸಪೂರ ಗ್ರಾಮ ರವರುಗಳ ಮೇಲೆ ದಾಳಿ ಮಾಡಿ ಸದರಿಯವರಿಂದ ನಗದು ಹಣ 3900/- ರೂಪಾಯಿ ಹಾಗು ಜೂಜಾಟಕ್ಕೆ ಬಳಸಿದ 52 ಇಸ್ಪಿಟ್ ಎಲೆಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಚಿಟಗುಪ್ಪಾ ಪೊಲೀ ಠಾಣೆ ಅಪರಾಧ ಸಂಖ್ಯೆ 118/2022 ಕಲಂ 379 ಐಪಿಸಿ :-

ದಿನಾಂಕ:09/10/2022 ರಂದು 1830 ಗಂಟೆಗೆ ಫಿರ್ಯಾದಿ ಅಮರ ತಂದೆ ಸುಭಾಷ ಅಸ್ಟಿಕರ, ವಯ:46 ವರ್ಷ ಜಾತಿ, ಭೋಸಾರ ಕ್ಷೇತ್ರೀಯಾ ಸಾ/ಬಾಲಾಜಿ ಮಂದಿರ ಹತ್ತಿರ ಹುಮನಾಬಾದ. ರವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಾಂಶವೆನೆಂದರೆ ಮಂಗಲಗಿಯಲ್ಲಿ ಇಂಡಿಯಾನ ಅಯಿಲ್ ಪೇಟ್ರೋಲ್ ಪಂಪ ಇರುತ್ತದೆ. ಇವರ ಹತ್ತಿರ ಒಂದು ಟ್ಯಾಂಕರ ಲಾರಿ ನಂ:OD24B1759 ಇರತ್ತದೆ. ಸದರಿ ಲಾರಿಯ ಮೇಲೆ ಹಳ್ಳಿಖೇಡ(ಕೆ) ಗ್ರಾಮದ ರಬ್ಬಾನಿ ತಂದೆ ಮೈನೋದ್ದಿನ ಜಮಾದಾರ, ವಯ:36 ವರ್ಷ ಜಾತಿ :ಮುಸ್ಲಿಂ, ರವರು ಲಾರಿ ಚಾಲಕನಾಗಿ ಸುಮಾರು ಎರಡು ವರ್ಷದಿಂದ ಇರುತ್ತಾರೆ. ಟ್ಯಾಂಕರ ಲಾರಿ ನಂ:OD24B1759 ನೇದ್ದನ್ನು ಪ್ರತಿನಿತ್ಯ ಮುಂಜಾನೆ ಕಲಬುರ್ಗಿ ಡೀಪೋಕ್ಕೆ ಚಲಾಯಿಸಿಕೊಂಡು ಹೋಗಿ ಪೆಟ್ರೋಲ್ ತಂದು ಪಂಪಿನಲ್ಲಿ ಖಾಲಿ ಮಾಡಿ ಲಾರಿಯನ್ನು ಹಳ್ಳಿಖೇಡ(ಕೆ) ಗ್ರಾಮದ ಧರ್ಮಣ್ಣಾ ಉಪಾರ ರವರ ಮನೆಯ ಮುಂದೆ ನಿಲ್ಲಿಸಿ ಅವನ ಮನೆಗೆ ಹೋಗಿ ಮಲಗಿಕೊಂಡು ಮುಂಜಾನೆ ತೆಗೆದುಕೊಂಡು ಹೋಗುತ್ತಾನೆ. ಹೀಗಿರುವಾಗ ದಿನಾಂಕ 08/10/2022 ರಂದು ಸಾಯಂಕಾಲ 05:00 ಗಂಟೆಗೆ ಪ್ರತಿನಿತ್ಯದಂತೆ ನಮ್ಮ ಟ್ಯಾಂಕರ ಲಾರಿ ನಂ:OD24B1759 ನೇದ್ದನ್ನು ಹಳ್ಳಿಖೇಡ(ಕೆ) ಗ್ರಾಮದ ಧರ್ಮಣ್ಣಾ ಉಪಾರ ರವರ ಮನೆಯ ಮುಂದೆ ನಿಲ್ಲಿಸಿ ಅವನ ಮನೆಗೆ ಹೋಗಿ ಮಲಗಿಕೊಂಡು ದಿನಾಂಕ: 09/10/2022 ರಂದು ಮುಂಜಾನೆ 06:30 ಗಂಟೆಗೆ ನಮ್ಮ ಚಾಲಕನ್ನು ಲಾರಿಯ ಹತ್ತಿರ ಹೋಗಿ ನೋಡಲು ನಮ್ಮ ಲಾರಿಯ ಎರಡು ಸೈಡಿನ ಹಿಂದಿನ ನಾಲ್ಕು ಡಿಸ್ಕದೊಂದಿಗೆ ಟೈರಗಳು ಕಾಣಲಿಲ್ಲ ಎರಡು ಸೈಡಿನ ಹಿಂದಿನ ನಾಲ್ಕು ಡಿಸ್ಕದೊಂದಿಗೆ ಟೈರಗಳು ಅವುಗಳ ಅಂ.ಕಿ. ರೂ. 80000/-ಸಾವಿರ ಬೆಲೆಬಾಳುವವು ದಿನಾಂಕ : 08/10/2022 ರಂದು ರಾತ್ರಿ 10:00 ಗಂಟೆಯಿಂದ ದಿನಾಂಕ:09/10/2022 ರಂದು 06:00 ಗಂಟೆಯ ಅವಧಿಯಲ್ಲಿ ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.